[ **Govt. of Karnataka** **C.R.P. 67]**

| |
|---|
| **Deposition Sheets (RP.No.57) Form No.4** |

**IN THE COURT OF Addl. CIVIL JUDGE & J.M.F.C., KARKALA.**

**Criminal Case No. 500/2023**

ಪಿ.ಡಬ್ಲು : 3 ಸಿ.ಡಬ್ಲು : 3

ಸಾಕ್ಷಿದಾರಳ ಹೆಸರು : ವೀಣಾ
ಗಂಡನ ಹೆಸರು : ಕೇಶವ
ಪ್ರಾಯ : 42 ವರ್ಷ
ಉದ್ಯೋಗ : ಆಶಾಕಾರ್ಯಕರ್ತೆ
ವಾಸ : ಕಲ್ಯಾ

ದಿನಾಂಕ 03.08.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-

ಆರೋಪಿತರ ಪರಿಚಯ ಇರುತ್ತದೆ. 1 ನೇ ಆರೋಪಿಯುನ್ಯಾಯಾಲಯದಲ್ಲಿ ಗೈರು ಹಾಜರಾಗಿದ್ದು 1 ನೇ ಆರೋಪಿಯನ್ನು ಗುರುತಿಸಲು ಯಾವುದೇ ತಕಾರು ಇಲ್ಲ ಎಂದು 1 ನೇ ಆರೋಪಿ ಪರ ವಕೀಲರು ನುಡಿದಿರುತ್ತಾರೆ.

ಚಾಸಾ-1, 2, 4 ಮತ್ತು 5 ರವರ ಪರಿಚಯ ಇರುತ್ತದೆ.

ದಿಃ03.12.2022 ರಂದು ರಾತ್ರಿ 8.30 ಗಂಟೆಗೆ ನಾನು, ಚಾಸಾ-1, 5 ಮತ್ತು 2 ನೇ ಆರೋಪಿತರು ನಮ್ಮ ಮನೆಯ ಹತ್ತಿರದಲ್ಲಿರುವ ಅಶೋಕ ಎಂಬುವವರ ಮನೆಯಲ್ಲಿ ಮೆಹಂದಿ ಕಾರ್ಯಕ್ರಮಕ್ಕೆ ಹೋಗಿದ್ದು ನಂತರ ಕಾರ್ಯಕ್ರಮ ಮುಗಿಸಿ ಮನೆಗೆ 10.00 ರಿಂದ 10.30 ಗಂಟೆಗೆ ಬಂದಾಗ ಚಾಸಾ-1 ರವರ ಮನೆಯ ಅಡುಗೆ ಕೋಣೆಯ ಬಾಗಿಲು ತೆರೆದಿತ್ತು. ನಂತರ ಚಾಸಾ-1 ರವರು ತನ್ನ ಗಂಡನಾದ ಚಾಸಾ-2 ರವರಿಗೆ ಕರೆ ಮಾಡಿ ವಿಷಯವನ್ನು ತಿಳಿಸಿದರು. ನಂತರ ಚಾಸಾ-2 ರವರು ಪೊಲೀಸರನ್ನು ಕರೆದುಕೊಂಡು ಮನೆಗೆ ಬಂದರು. ನಾವು ಮನೆಯ ಹೊರಗಡೆ ಇದ್ದೇವು. ಚಾಸಾ-1 ಮತ್ತು 2, ಹಾಗೂ ಪೊಲೀಸರು ಮನೆಯ ಒಳಗೆ ಹೋಗಿ ವಿಚಾರಣೆ ಮಾಡುತ್ತಿದ್ದರು. ಆ ಸಮಯದಲ್ಲಿ 2 ನೇ

ಆರೋಪಿಯು ನಮ್ಮೊಂದಿಗೆ ಇದ್ದರು. ಪೊಲೀಸರು ನಮ್ಮನ್ನು ಹಾಗೂ 2 ನೇ ಆರೋಪಿಯನ್ನು ಸಾಕ್ಷಿದಾರನ್ನಾಗಿ ಸಹಿ ತೆಗೆದುಕೊಂಡಿರುತ್ತಾರೆ.

ಮನೆಯ ಒಳಗೆ ಗೊದ್ರೆಜ್ ಕಾಪಾಟನ್ನು ತೆರೆದು ಬಟ್ಟೆಗಳನ್ನು ಚಲ್ಲಾಪಿಲ್ಲಿ ಮಾಡಿ ಮನೆಯಲ್ಲಿದ್ದ ಪರ್ಸ್ ಮತ್ತು ಸ್ಟೀಲ್ ಡಬ್ಬದಲ್ಲಿದ್ದ 13 ಬಗೆಯ ಚಿನ್ನವನ್ನು ಆರೋಪಿತರು ಕಳುವು ಮಾಡಿ ಹೋಗಿರುತ್ತಾರೆ ಎಂದು ತಿಳಿಯಿತು. ಪೊಲೀಸರು ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡಿರುತ್ತಾರೆ. ನಂತರ ಚಾಸಾ-1 ರವರು ಬಂಗಾರವನ್ನು 2 ನೇ ಆರೋಪಿತರು 1 ನೇಆರೋಪಿಯೊಂದಿಗೆ ಸೇರಿ ಕಳುವು ಮಾಡಿದ್ದಾರೆ ಎಂದು ತಿಳಿಸಿದರು.

ಘಟನೆ ನಡೆದ 4 ತಿಂಗಳ ನಂತರ ಚಾಸಾ-1 ರವರೊಂದಿಗೆ ಬಂಗಾರವನ್ನು ತೆಗೆದುಕೊಳ್ಳಲು ನಾನು ಠಾಣೆಗೆ ಹೋಗಿರುತ್ತೇನೆ. ಠಾಣೆಯಲ್ಲಿ ಪೊಲೀಸರು ಮಹಜರಿಗೆ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ಆ ಸಮಯ ನಾನು ಬಂಗಾರವನ್ನು ನೋಡಿರುತ್ತೇನೆ. ಸಾಕ್ಷಿಯು ಬಂಗಾರದ ಒಡವೆಗಳನ್ನು ಬಿಡುಗಡೆ ಸಮಯದಲ್ಲಿ ತಯಾರಿಸಿದ ಮಹಜರನ್ನು ಹಾಗೂ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದ್ರಿ ಮಹಜರನ್ನು ಈಗಾಗಲೇನಿಪಿ-6 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-6(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-7 ರಿಂದ 20 ಭಾವಚಿತ್ರಗಳನ್ನು ನೋಡಿ ಗುರುತಿಸಿರುತ್ತಾರೆ. ಈ ಬಗ್ಗೆ ಪೊಲೀಸರಿಗೆ ನಾನು ನನ್ನ ಮುಂದುವರಿದ ಹೇಳಿಕೆಯನ್ನು ನೀಡಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಪರ್ಸ್ ಮತ್ತು ಸ್ಟೀಲ್ ಡಬ್ಬ ಮತ್ತು ಮುರಿದ ಬೀಗವನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಾಲೇ ಮು ಮಾ-1 ರಿಂದ 3 ಎಂದು ಗುರುತಿಸಲಾಯಿತು. ಸಾಕ್ಷಿಯು ಮುದ್ದೆ ಮಾಲುಗಳ ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-21 ರಿಂದ 23 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು :</u> ಆರೋಪಿತರ ಪರ : ಶ್ರೀ ಎಸ್ ಕೆ ವಕೀಲರಿಂದ ಃ

ನಿಪಿ-10, 12, 13, 14, 15, 17, 19 ಭಾವಚಿತ್ರದಲ್ಲಿರುವ ಆಭರಣಗಳು ಕಳುವಾದ ಆಭರಣಗಳನ್ನು ಕರಗಿಸಿ ಅದರ ಬದಲಿಗೆ ಬೇರೆ ಮಾಡಿ ಕೊಟ್ಟಿರುತ್ತಾರೆ. ಸದರಿ ಬಂಗಾರವನ್ನು 2 ನೇ ಅರೋಪಿಯು ಮಾರಿದ ಅಕ್ಕಸಾಲಿಗರು ಅದನ್ನು ಕರಗಿಸಿ ಮೇಲೆ ಹೇಳಿದ ಆಭರಣಗಳನ್ನು ಮಾಡಿ ನೀಡಿರುತ್ತಾರೆ ಎಂದು ಪೊಲೀಸರು ತಿಳಿಸಿರುತ್ತಾರೆ.

ಚಾಸಾ-1 ರವರು ನನ್ನ ಗಂಡನ ತಂಗಿ. ಈ ದಿನ ನ್ಯಾಯಾಲಯಕ್ಕೆ ನನ್ನನ್ನು ಹಾಗೂ ಚಾಸಾ-4 ರವರನ್ನು ಚಾಸಾ-1 ರವರು ಕರೆದುಕೊಂಡು ಬಂದಿರುತ್ತಾರೆ. ನಮ್ಮ ಮನೆಯಿಂದ ಮೆಹಂದಿ ಕಾರ್ಯಕ್ರಮದ ಮನೆಗೆ ಎರಡುವರೆ ಕಿಮೀ ದೂರ ಇದೆ. ಹೋಗುವಾಗ ಅರ್ಧ ದಾರಿಯವರೆಗೆ ಸ್ಕೂಟಿಯಲ್ಲಿ ಹೋಗಿರುತ್ತೇವೆ ನಂತರ ಆಟೋದಲ್ಲಿ ಹೋಗಿರುತ್ತೇವೆ, ಹಿಂತಿರುಗಿ ಬರುವಾಗ ಸ್ಕೂಟಿ ಇಟ್ಟ ಜಾಗದ ವರೆಗೆ ನಡೆದುಕೊಂಡು ಬಂದಿರುತ್ತೇವೆ. ನನ್ನ ಮತ್ತು ಚಾಸಾ-1 ರವರ ಮನೆಯು ಎದುರುಬಂದುರು ಎಂದರೆ ಸರಿ. ನಮ್ಮ ಮತ್ತು ಚಾಸಾ-1 ರವರ ಮನೆಯಲ್ಲಿ ಎರಡೆರಡು ನಾಯಿಗಳು ಇವೆ ಎಂದರೆ ಸರಿ. ನಮ್ಮ ಮನೆಯ ಪಕ್ಕದಲ್ಲಿ ಚಾಸಾ-1 ರವರ ಮನೆ ಮಾತ್ರ ಇರುತ್ತದೆ. ಉಳಿದ ಮನೆಗಳು ನಮ್ಮ ಮನೆಯಿಂದ 200-300 ಮೀಟರ್ ದೂರದಲ್ಲಿ ಇರುತ್ತದೆ. ನಾವು ಬರುವಾಗ ಮೊದಲು ಚಾಸಾ-1 ರವರ ಮನೆ ಸಿಗುತ್ತದೆ. ನಂತರ ನಮ್ಮ ಮನೆ ಸಿಗುತ್ತದೆ. ಬೀಗ ಒಡೆದ ವಿಚಾರವನ್ನು ಮೊದಲು 2 ನೇ ಆರೋಪಿತರೆ ನೋಡಿ ನಮಗೆ ತಿಳಿಸಿರುತ್ತಾರೆ. ನಾವು ಮನೆಯ ಗೇಟಿನಿಂದ ಮನೆಯ ಬಾಗಿಲನ್ನು ನೋಡಿರುತ್ತೇವೆ. ಮನೆಯ ಬಾಗಿಲಿಗೂ ಗೇಟಿಗೂ 30 ಅಡಿ ದೂರ ಇರಬಹುದು. ನಾವು ಗೇಟಿನ ಹೊರಗಿನಿಂದ ಒಳಗೆ ಹೋಗಿರುವುದಿಲ್ಲ. ತಕ್ಷಣ ಚಾಸಾ-1 ರವರು ತನ್ನ ಗಂಡನಿಗೆ ಕರೆ ಮಾಡಿ ತಿಳಿಸಿರುತ್ತಾರೆ. ಚಾಸಾ-2 ರವರು ಪೊಲೀಸರಿಗೆ ದೂರನ್ನು ನೀಡಿ ಅವರನ್ನು ಕರೆದುಕೊಂಡು ಬಂದಿರುತ್ತಾರೆ. ಒಬ್ಬರು ಮಹಿಳಾ ಪೊಲೀಸ್ ಮತ್ತು 2 ಜನ ಪುರುಷ ಪೊಲೀಸರು ಬಂದಿರುತ್ತಾರೆ. ಪೊಲೀಸರು ಬರುವಾಗ ಸಮಯ 11.00 -11.30 ಗಂಟೆ ಆಗಿರುತ್ತದೆ. ಪೊಲೀಸರು ಬಂದ ನಂತರವೇ ಚಾಸಾ-1 ಮತ್ತು 2 ರವರು ಮನೆಯ ಒಳಗೆ ಹೋಗಿರುತ್ತಾರೆ. ಸಾಕ್ಷಿ ಮುಂದುವರಿದು ಅದರ ಪೂರ್ವದಲ್ಲಿ ಚಾಸಾ-1 ರವರು ಮನೆಯ ಹಿಂದಿನ ಕಿಟಕಿಯಿಂದ ಗಾಡ್ರೆಜ್ ಕಾಪಾಟುಗಳು ತೆರೆದಿರುನ್ನು ನೋಡಿರುತ್ತಾರೆ. ಆ ಸಮಯದಲ್ಲಿ 2 ನೇ ಆರೋಪಿಯ ಗಂಡನು ಸಹ ಹೋಗಿ ನೋಡಿರುತ್ತಾರೆ. 2 ನೇ ಆರೋಪಿಯ ಗಂಡನನ್ನು 2 ನೆ ಆರೋಪಿಯೇ ಕರೆ ಮಾಡಿ ಕರೆದಿರುತ್ತಾರೆ. ಕಾರ್ಯಕ್ರಮಕ್ಕೆ ಹೋಗುವಾಗ ಮನೆಯ ಕಿಟಕಿ ಸ್ವಲ್ಪ ತೆರೆದಿತ್ತು.

ಮೊದಲು ಮನೆಯ ಒಳಗೆ ಪೊಲೀಸರು ಮತ್ತು ಚಾಸಾ-1 ರವರು ಹೋಗಿರುತ್ತಾರೆ. ನಂತರ ಚಾಸಾ-2 ರವರು ಹೋಗಿರುತ್ತಾರೆ. ಘಟನಾ ಸ್ಥಳದಲ್ಲಿ 1.00 ರಿಂದ 1.30 ಗಂಟೆಯ ಕಾಲ ಪೊಲೀಸರು ಇದ್ದರು. ಅಲ್ಲಿ ಪೊಲೀಸರು ಫೋಟೋವನ್ನು ತೆಗೆದಿರುತ್ತಾರೆ, 2 ನೇ ಆರೋಪಿಯ ಮಗಳಲ್ಲಿ ಪೊಲೀಸರು ಚಾಸಾ-1 ರವರಲ್ಲಿ ಕೇಳಿ ಹೇಳಿದ ವಿಚಾರಗಳನ್ನು ಬರೆಸಿರುತ್ತಾರೆ ಹಾಗೂ ಬರಹ ಮಾಡಿ ನಮ್ಮ ಸಹಿ ಪಡೆದುಕೊಂಡಿರುತ್ತಾರೆ, ಸದರಿ ಸಮಯ ಚಾಸಾ-1 ರವರ ಸಹಿಯನ್ನು ಪಡೆದುಕೊಂಡಿರುತ್ತಾರೆ. ಸದರಿ ಸಮಯದಲ್ಲಿ ನನ್ನ, ಚಾಸಾ-1, 4 5 ಹಾಗೂ 2 ನೇ ಆರೋಪಿತೆಯ ಸಹಿಯನ್ನು ಪಡೆದುಕೊಂಡಿರುತ್ತಾರೆ. ನಾನು ಹಾಗೂ ನನ್ನ ಮಗ ಆ ದಿನ ರಾತ್ರಿ ಚಾಸಾ-1 ರವರ ಮನೆಯಲ್ಲಿ ಉಳಿದುಕೊಂಡಿದ್ದೆ.

ನನ್ನ ಮನೆಯಲ್ಲಿ ನಾನು ಮತ್ತು ನನ್ನ ಮಗ ಮಾತ್ರ ಇರುತ್ತೇವೆ. ನಾನು ಮತ್ತು ಚಾಸಾ-1 ರವರು ಪರಸ್ಪರ ಸಹಾಯ ಮಾಡಿಕೊಳ್ಳುತ್ತೇವೆ. ತನಿಖೆಗೆ ಪೊಲೀಸರು ಆಗಾಗ ಬರುತ್ತಿದ್ದರು, ಆದರೆ ನಾನು ನನ್ನ ಕೆಲಸಕ್ಕೆ ಹೋಗುತ್ತಿದ್ದರಿಂದ ನನಗೆ ಆ ಬಗ್ಗೆ ಗೊತ್ತಿಲ್ಲ. ನಾನು ಕಳುವಾಗಿದೆ ಎನ್ನಲಾದ ದಿನ ಪೊಲೀಸರಿಗೆ ಕೊಟ್ಟ ಹೇಳಿಕೆಯನ್ನು ಬಿಟ್ಟು ಬೇರೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ಚಾಸಾ-1 ರವರು ನ್ಯಾಯಾಲಯದ ಆದೇಶದಂತೆ ಚಿನ್ನದ ಆಭರಣಗಳನ್ನು ಪೊಲೀಸ್ ಠಾಣೆಯಲ್ಲಿ ಪಡೆದುಕೊಳ್ಳುವ ಸಮಯ ನಾನು, ಚಾಸಾ-1, 2, 6 ರವರು ಇದ್ದೇವು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಒಂದು ಬಾರಿ ಪೊಲೀಸ್ ಠಾಣೆಗೆ ಹೋಗಿರುತ್ತೇನೆ.

ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ 2 ನೇ ಆರೋಪಿಯು ನಮ್ಮೊಂದಿಗೆ ಮೆಹಂದಿ ಕಾರ್ಯಕ್ರಮಕ್ಕೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಚಿನ್ನಾಭರಣಗಳನ್ನು ಭದ್ರತೆಯಲ್ಲಿ ಇಡುತ್ತಾರೆ ಎಂದರೆ ಸರಿ. ಯಾರು ಚಿನ್ನಾಭರಣಗಳನ್ನು ಟೀಫೀನ್ ಬಾಕ್ಸ್ ನಲ್ಲಿ ಇಡುವುದಿಲ್ಲ ಎಂದರೆ ಸರಿಯಲ್ಲ.

ಬೀಗ ಕೀಲಿಯನ್ನು ಒಡೆಯಲು ಉಪಯೋಗಿಸಿದ ಯಾವುದಾದರೂ ಸಾಧನ ಘಟನಾ ಸ್ಥಳದಲ್ಲಿ ಇತ್ತಾ ಎಂದರೆ ಸಾಕ್ಷಿಯು ಶಾವಿಗೆ ಮಾಡುವ ಕಬ್ಬಿಣದ ಮಿಶನ್ ನ ಒಂದು ಬೆಂಡ್ ಆಗಿ ಕೆಳಗೆ ಬಿದ್ದಿತ್ತು ಅದರಿಂದ ಒಡೆದಿರುಬಹುದು ಎಂದು ಚಾಸಾ-1

ರವರು ಪೊಲೀಸರಿಗೆ ತಿಳಿಸಿರುತ್ತಾರೆ. ಸದರಿ ಶಾವಿಗೆಯ ಮೆಶಿನ್ ನ್ನು ಪೊಲೀಸರು ವಶಪಡಿಸಿಕೊಂಡಿರುತ್ತಾರೊ ಎಂದು ನನಗೆ ಗೊತ್ತಿಲ್ಲ. ಚಾಸಾ-1 ನನ್ನ ಗಂಡನ ತಂಗಿಯಾದ್ದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನೆಯಾಗಿದೆ ಎಂದು ಹೇಳುವ ದಿನ 2 ನೇ ಆರೋಪಿಯು ಆವರ ತಾಯಿಯು ಕ್ಯಾನ್ಸರ್ ಪೀಡಿತೆಯಾಗಿ ಮಂಗಳೂರಿನ ಫಾದರ್ ಮುಲ್ಲ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಾಗಿದ್ದು ಅವರನ್ನು ನೋಡಿಕೊಳ್ಳಲು ಮಂಗಳೂರಿನಲ್ಲಿ ಇದ್ದರು ಎಂದರೆ ಸರಿಯಲ್ಲ. 2 ನೇ ಆರೋಪಿ ಹಾಗೂ ಆಕೆಯ ಗಂಡನಿಗೂ ಚಾಸಾ-1 ಮತ್ತು 2 ರವರಿಗೂ ಹಲವು ವರ್ಷಗಳಿಂದ ವೈಮನಸ್ಸು ಇದೆ ಎಂದರೆ ಸರಿಯಲ್ಲ. ಈ ರೀತಿ ವೈ ಮನಸ್ಸು ಇದ್ದ ಕಾರಣ ಚಾಸಾ-1 ರವರು ಆರೋಪಿತರ ಮೇಲೆ ಸುಳ್ಳು ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಚಾಸಾ-1 ರವರ ಮನೆಗೆಬಂದಿರುವುದಿಲ್ಲ, ಮಹಜರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರ ಮಾತನುನ ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮುದ್ದೆ ಮಾಲುಗಳಿಗೂ ಆರೋಪಿತರಿಗೂ ಯಾವುದೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ: ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ